ಕೊಟ್ಟಿದ್ದಾರೆ ಸರ್ಕಾರಕ್ಕೆ ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಕೂಡ ಹೇಳಿದ್ದಾರೆ. ಅದಕ್ಕೆ ನಾವು ಮೂರು ದಿನಗಳ ಕಾಲ ವಿಶೇಷ ಅಧಿವೇಶನ ಕರೆಸಿ ಚರ್ಚೆ ಮಾಡಿದ್ದೇವೆ. ಇವತ್ತು ನಮ್ಮ ರಾಜ್ಯದ ಘನತೆವೆತ್ತ ರಾಜ್ಯಪಾಲರು ನಾಡಿದ್ದು ಬಂದು ಇಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಆ ಸಂದರ್ಭದಲ್ಲಿ ಇವತ್ತು ರಾಜ್ಯಪಾಲರು ಉತ್ತರ ಕೊಟ್ಟಿದ್ದಾರೆ. ರಾಜ್ಯಪಾಲರು ಬರೆದಂತಹ ಪತ್ರದಲ್ಲಿ ಕೂಡ ಅವರು ಹೇಳಿದ್ದಾರೆ. "ನೀವು ಹೇಳತಕ್ಕ ವಿಷಯಗಳನ್ನೂ ಒಪ್ಪುತ್ತಿದ್ದೇನೆ. ಅವು ಪ್ರಸ್ತುತ. ಈ ಒಂದು ಪರಿಸ್ಥಿತಿಯಲ್ಲಿ ಇದರ ಬಗ್ಗೆ ನಾನು ಕ್ಲಾರಿಫಿಕೇಶನ್ ತೆಗೆದುಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಚಿಂತನೆ ಮಾಡುತ್ತೇನೆ" ಎಂದು ಅವರು ಹೇಳಿದ್ದಾರೆ. ಇದಕ್ಕೆ ತಾವು ತರಾತುರಿಯಲ್ಲಿ ಗಡಿಭಾಗದಲ್ಲಿ ಅಧಿವೇಶನಕ್ಕೆ ಬಂದಿದ್ದೀರಿ. ನಿನ್ನೆ ಕೂಡ ನಾವು ಹೇಳಿದ್ದೇವೆ. ಈ ಅಧಿವೇಶನದಲ್ಲಿ ಯಾವ ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕು, ಏನು ಅಜೆಂಡಾ ಇಡಬೇಕು ಎಂದು ಹೇಳಿದ್ದೆವು, ಅಜೆಂಡಾ ಇಡಲಿಲ್ಲ. ಆದರೂ ಕೂಡ ಬೆಳಗಾಂನಲ್ಲಿ ಆಗತಕ್ಕ ಅಧಿವೇಶನದಲ್ಲಿ ಸರ್ಕಾರದ ಈ ನಿರ್ಣಯವನ್ನು ಒಪ್ಪುತ್ತೇವೆನ್ನತಕ್ಕಂತಹ: ಮಾತನ್ನು ನಾವು ಹೇಳಿದ್ದೇವೆ. ನಿನ್ನೆ ಕೂಡ ಮಹಾಜನ್ ವರದಿಯ ಬಗ್ಗೆ ಒಂದು ರೆಸಲ್ಯೂಷನ್ ತಂದೆವು. ಅರ್ಥಪೂರ್ಣವಾಗಿ ಅಧಿವೇಶನ ಆಗಬೇಕಾದರೆ ಮಹಾಜನ್ ವರದಿಯೇ ಅಂತಿಮ ವರದಿ ಎನ್ನತಕ್ಕಂತಹ ತೀರ್ಮಾನವನ್ನು ಕರ್ನಾಟಕ ಸರ್ಕಾರವೇ ತೆಗೆದುಕೊಳ್ಳಬೇಕು. ನಿನ್ನೆ ಮುಖ್ಯಮಂತ್ರಿಗಳು ಒಪ್ಪಿದರು. ಅವರು ನಿರ್ಣಯ ಮಂಡಿಸಿದರು. ನಾವು ಅನುಮೋದನೆಯನ್ನೂ ಕೂಡ ಮಾಡಿದ್ದೇವೆ. There has been a clear message ಜನರಿಗೆ ಒಂದು ಒಳ್ಳೆಯ ಸಂದೇಶ ಕೊಟ್ಟಂತೆ ಆಗಿದೆ. ಅದೇ ರೀತಿಯಾಗಿ ನಾಡಿದ್ದು ರಾಜ್ಯಪಾಲರು ಬಂದಾಗ ಅವರು ಮಾಡುವ ಭಾಷಣದ ಮೇಲೆ ಚರ್ಚೆ ಇಲ್ಲ. ಅವರೂ ಬಂದು ನಮಗೆ ಸಂದೇಶ ಕೊಡಬಹುದು, ಭಾಷಣ ಮಾಡಬಹುದು. ಇವತ್ತು ಗೌರವಾನ್ವಿತ ರಾಜ್ಯಪಾಲರು ಹೇಳತಕ್ಕಂತಹದ್ದನ್ನು ಕೂಡ ಪಾಲನೆ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಇವತ್ತು ಇವತ್ತು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಯಾವ ಪತ್ರವನ್ನು ಶ್ರೀಮಾನ್ ಪೆಜ್.ಕೆ. ಪಾಟೀಲ್‌ರವರು, ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು ರಾಜ್ಯಪಾಲರಿಗೆ ಬರೆದಿದ್ದಾರೆ, ಅದಕ್ಕೆ ರಾಜ್ಯಪಾಲರೂ ಕೂಡ ಉತ್ತರ ಏನು ಕೊಟ್ಟಿದ್ದಾರೆ? ಉತ್ತರದಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕ ರೀತಿಯಲ್ಲಿ ನಮಗೆ ಅನುವು ಮಾಡಿಕೊಡಬೇಕು ಮತ್ತು ನಾವೆಲ್ಲರೂ ಕೂಡ ಆ ಒಂದು ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನತಕ್ಕ ರೀತಿಯಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಅಧ್ಯಕ್ಷರು** : ಅದನ್ನು ಕಳುಹಿಸಿಕೊಡಿ. ಈಗ ಕಾರ್ಯದರ್ಶಿಯವರ ವರದಿ.

**ಶ್ರೀ ಎಸ್.ಬಿ. ಪಾಟೀಲ್ (ಅಪರ ಕಾರ್ಯದರ್ಶಿ)** : ಮಾನ್ಯ ಅಧ್ಯಕ್ಷರೆ, ಪನ್ನೆರಡನೇ ವಿಧಾನಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಂದ : ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**(ಅನುಬಂಧ-1)**

**ಅಧ್ಯಕ್ಷರು** : ಮಂಡಿಸಲಾಯಿತು.